ತಾಂತ್ರಿಕ ಶಿಕ್ಷಣ ನಿರ್ದೇಶಕರು, ಕರ್ನಾಟಕ, ಬೆಂಗಳೂರು ಇವರ ಕಚೇರಿ ನಡವಳಿಗಳು

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಈ ಕೆಳಕಂಡ ಖಾಸಗಿ ಅನುದಾನಿತ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೆ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಮೂಲಕ ನೇರವಾಗಿ ಆಗಸ್ಟ್ 2013ರ ಮಾಹೆಯ ಸರ್ಕಾರದ ಪಾಲಿನ ಸಹಾಯಧನ ಬಿಡುಗಡೆ ವಿಚಾರ.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ: ಇಡಿ/55/ಟಿಜಿಎಲ್/64, ದಿ: 29-10-1966.
2) ಸರ್ಕಾರಿ ಆದೇಶ ಸಂಖ್ಯೆ: ಇಡಿ/184/ಟಿಪಿಇ 2009, ದಿ: 27.07.2009
3) ಸರ್ಕಾರಿ ಆದೇಶ ಸಂಖ್ಯೆ: ಇಡಿ /184/ಟಿಪಿಇ/ 2009, ದಿ: 02.03.2010
4) ಸರ್ಕಾರಿ ಆದೇಶ ಸಂಖ್ಯೆ: ಇಡಿ /184/ಟಿಪಿಇ/ 2009, ದಿ: 14-05-2010
5) ಸರ್ಕಾರಿ ಆದೇಶ ಸಂಖ್ಯೆ: ಇಡಿ /184/ಟಿಪಿಇ/ 2009, ದಿ: 14-03-2011
6) ಸರ್ಕಾರಿ ಆದೇಶ ಸಂಖ್ಯೆ: ಇಡಿ /60/ಟಿಪಿಇ/ 2012, ದಿ: 16-10-2012

*****

ಪ್ರಸ್ತಾವನೆ:-

ಉಲ್ಲೇಖ(1) ರ ಸರ್ಕಾರಿ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ನಿರ್ದೇಶಕರು,ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಅಧಿಕಾರ ನೀಡಲಾಗಿದೆ.ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳ ಸಿಬ್ಬಂದಿಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡುವ ಶೇ.85 ರಷ್ಟು ಸಹಾಯಧನವನ್ನು ಹಾಗೂ ಸಂಬಂಧಪಟ್ಟ ಸಂಸ್ಥೆಗಳು ನೀಡಬೇಕಾಗಿರುವ ಶೇ.15ರಷ್ಟು ಮೊತ್ತದೊಂದಿಗೆ ಪ್ರತೀ ತಿಂಗಳು ರಾಷ್ಟ್ರೀಕೃತ ಬ್ಯಾಂಕ್‌ಗೆ ಜಮೆ ಮಾಡುವ ಮೂಲಕ ಸಿಬ್ಬಂದಿವರ್ಗದವರುಗಳಿಗೆ (ಬೋಧಕ ಮತ್ತು ಬೋಧಕೇತರ)ವಿತರಿಸಲು ಸರ್ಕಾರವು ಅನುಮತಿಸಿರುತ್ತದೆ.ಆದರೆ,ಉಲ್ಲೇಖ(6)ರ ಸರ್ಕಾರಿ ಆದೇಶದಲ್ಲಿ ಸರ್ಕಾರವು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ ನೀಡಲಾಗುತ್ತಿರುವ ಸಹಾಯನುದಾನವನ್ನು ಶೇ.85 ರಿಂದ ಸೇ.100ಕ್ಕೆ ಹೆಚ್ಚಿಸಿ ಮಂಜೂರಾತಿಯನ್ನು ನೀಡಿರುತ್ತದೆ.

ಉಲ್ಲೇಖ (3) ಮತ್ತು (4) ರ ಆದೇಶಗಳನ್ವಯ, ಇಲಾಖೆಯು ತನ್ನ ಅಧೀನಕ್ಕೆ ಒಳಪಟ್ಟಿರುವ ಎಲ್ಲಾ ಅನುದಾನಿತ ಸಂಸ್ಥೆಗಳಿಗೆ, 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಶಾಖೆಗಳಲ್ಲಿ ಸಿಬ್ಬಂದಿ ವರ್ಗದವರ ಹಾಗೂ ಪ್ರಾಂಶುಪಾಲರ ಹೆಸರಿನಲ್ಲಿ ಪ್ರತ್ಯೇಕ ಉಳಿತಾಯ ಖಾತೆಗಳನ್ನು ತೆರೆಯುವಂತೆ ಸೂಚನೆಯನ್ನು ನೀಡಿದ್ದು, ಅದರಂತೆ, ಈ ಕೆಳಕಂಡ ಅನುದಾನಿತ ಸಂಸ್ಥೆಗಳು ಸಿಬ್ಬಂದಿ ವರ್ಗದವರ ಹಾಗೂ ಪ್ರಾಂಶುಪಾಲರ ಹೆಸರಿನಲ್ಲಿ ಪ್ರತ್ಯೇಕ ಖಾತೆಗಳನ್ನು ತೆರೆದಿರುವ ಬಗ್ಗೆ ಮಾಹಿತಿಯನ್ನು ನೀಡಿ ಆಗಸ್ಟ್ 2013ರ ಮಾಹೆಯ ವೇತನ ಬಿಲ್ಲುಗಳನ್ನು ಪಾವತಿಗಾಗಿ ಈ ಕಚೇರಿಗೆ ಸಲ್ಲಿಸಿರುತ್ತವೆ.

ಈ ಹಿನ್ನೆಲೆಯಲ್ಲಿ, ಸಂಸ್ಥೆಗಳು ಸಲ್ಲಿಸಿರುವ ಆಗಸ್ಟ್ 2013ರ ಮಾಹೆಯ ವೇತನ ಬಿಲ್ಲುಗಳನ್ನು ಪರಿಶೀಲಿಸಲಾಗಿದೆ. ಕೆಳಕಂಡ ಎಲ್ಲಾ ಸಂಸ್ಥೆಯ ಕ್ಲೈಮ್‌ಗಳನ್ನು ಇಲಾಖೆಯ ಪೂರ್ಣ ಲೆಕ್ಕ ತಪಾಸಣೆಯ ನಿಬಂಧನೆಗೊಳಪಡಿಸಿ ಈ ಕೆಳಕಂಡ ಪಟ್ಟಿಯ ಕಾಲಂ(5) ರಲ್ಲಿ ಕಾಣಿಸಿರುವ ಒಟ್ಟು ಮೊತ್ತ ರೂ.73234060/-(ರೂಪಾಯಿ ಏಳು ಕೋಟಿ ಮೂವತ್ತೆರಡು ಲಕ್ಷದ ಮೂವತ್ತ ನಾಲ್ಕು ಸಾವಿರದ ಅರವತ್ತು ಮಾತ್ರ)ಗಳನ್ನು, ಆಗಸ್ಟ್ 2013ರ ಮಾಹೆಯ ವೇತನವನ್ನು ವಿತರಿಸುವ ಸಲುವಾಗಿ ಬಿಡುಗಡೆಗೊಳಿಸಿ, ಕಾಲಂ(6) ರಲ್ಲಿ ಕಾಣಿಸಿರುವ ವೇತನ ಬಿಲ್ಲಿನಲ್ಲಿ ಕಡಿತಗೊಳಿಸಿರುವ ಮೊತ್ತ ರೂ.36025809/-(ರೂಪಾಯಿ ಮೂರು ಕೋಟಿ ಅರವತ್ತು ಲಕ್ಷದ ಇಪ್ಪತ್ತೈದು ಸಾವಿರದ ಎಂಟು ನೂರಾ ಒಂಬತ್ತು ಮಾತ್ರ)ಗಳನ್ನು ಸಂಬಂಧಪಟ್ಟ ಖಾತೆಗಳಿಗೆ ಜಮೆ ಮಾಡಲು ಅನುಕೂಲವಾಗುವಂತೆ ಪ್ರಿನ್ಸಿಪಾಲರ ಖಾತೆಗೆ ಹಾಗೂ ಕಾಲಂ(7) ರಲ್ಲಿ ಕಾಣಿಸಿರುವ ಮೊತ್ತ ರೂ37208251/-(ರೂಪಾಯಿ ಮೂರು ಕೋಟಿ ಎಪ್ಪತ್ತೆರಡು ಲಕ್ಷದ ಎಂಟು ಸಾವಿರದ ಎರಡು ನೂರಾ ಐವತ್ತೊಂದು ಮಾತ್ರ)ಗಳನ್ನು ನೇರವಾಗಿ ಸಿಬ್ಬಂದಿವರ್ಗದವರ ಖಾತೆಗಳಿಗೆ ಜಮೆ ಮಾಡಲು ತೀರ್ಮಾನಿಸಲಾಗಿದೆ, ಆದುದರಿಂದ,ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಡಿಟಿಇ 29 ಜಿಆರ್‌ಟಿ(2) 2013 ಬೆಂಗಳೂರು, ದಿ:2/9/13**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಆಗಸ್ಟ್ 2013ರ ಮಾಹೆಯ ವೇತನಕ್ಕಾಗಿ ಕಾಲಂ (5) ರಲ್ಲಿ ಕಾಣಿಸಿರುವ ಮೊತ್ತ ರೂ.73234060/-(ರೂಪಾಯಿ ಏಳು ಕೋಟಿ ಮೂವತ್ತೆರಡು ಲಕ್ಷದ ಮೂವತ್ತ ನಾಲ್ಕು ಸಾವಿರದ ಅರವತ್ತು ಮಾತ್ರ)ಗಳನ್ನು ಈ ಮೂಲಕ ಬಿಡುಗಡೆ ಮಾಡಿ, ಕಾಲಂ(6)ರಲ್ಲಿ ಕಾಣಿಸಿರುವ ರೂ.36025809/-(ರೂಪಾಯಿ ಮೂರು ಕೋಟಿ ಅರವತ್ತು ಲಕ್ಷದ ಇಪ್ಪತ್ತೈದು ಸಾವಿರದ ಎಂಟು ನೂರಾ ಒಂಬತ್ತು ಮಾತ್ರ)ಗಳನ್ನು ಪ್ರಿನ್ಸಿಪಾಲರ ಖಾತೆಗೂ ಹಾಗೂ ಕಾಲಂ(7) ರಲ್ಲಿ ಕಾಣಿಸಿರುವ ಮೊತ್ತ ರೂ37208251/-(ರೂಪಾಯಿ ಮೂರು ಕೋಟಿ ಎಪ್ಪತ್ತೆರಡು ಲಕ್ಷದ ಎಂಟು ಸಾವಿರದ ಎರಡು ನೂರಾ ಐವತ್ತೊಂದು ಮಾತ್ರ)ಗಳನ್ನು ಸಿಬ್ಬಂದಿಗಳ ಉಳಿತಾಯ ಖಾತೆಗಳಿಗೆ ನೇರವಾಗಿ ಜಮೆ ಮಾಡಲು ಅನುಕೂಲವಾಗುವಂತೆ ಈ ಮೊತ್ತವನ್ನು ಸಿ.ಟಿ.ಎಸ್.8 ರಲ್ಲಿ 'ಡ್ರಾ' ಮಾಡಿ ವಿತರಿಸಲು ಆದೇಶಿಸಲಾಗಿದೆ.

| ಕ್ರ.ಸಂ | ಸಂಕೇತ ಸಂಖ್ಯೆ | ಸಂಸ್ಥೆಯ ಹೆಸರು | ನೌಕರರ ಸಂಖ್ಯೆ | ಆಗಸ್ಟ್ 2013ಮಾಹೆಯ ಸರ್ಕಾರದ ಪಾಲಿನ ಮೊತ್ತ (ರೂ.) | ಪ್ರಿನ್ಸಿಪಾಲರ ಖಾತೆಗೆ ಜಮೆಯಾಗ ಬೇಕಾದ ಮೊತ್ತ (ರೂ.) | ನೌಕರರ ಖಾತೆಗೆ ಜಮೆಯಾಗ ಬೇಕಾದ ಒಟ್ಟು ಮೊತ್ತ (ರೂ.) |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | P202 | ಕೆ.ಎಚ್.ಕೆ. ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಧಾರವಾಡ | 76 | 3445884 | 500602 | 2945282 |
| 2 | P203 | ಆಚಾರ್ಯ ಪಾಠ ಶಾಲಾ ಪಾಲಿಟೆಕ್ನಿಕ್ ಸೋಮನಹಳ್ಳಿ, ಬೆಂಗಳೂರು | 60 | 2647924 | 258493 | 2389431 |
| 3 | P204 | ಎಂ.ಇ.ಐ ಪಾಲಿಟೆಕ್ನಿಕ್, ಬೆಂಗಳೂರು | 75 | 4114936 | 488726 | 3626210 |
| 4 | P205 | ಬಿವಿವಿಎಸ್ ಪಾಲಿಟೆಕ್ನಿಕ್ ಬಾಗಲಕೋಟೆ | 86 | 4162419 | 1330718 | 2831701 |
| 5 | P206 | ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು | 87 | 3710802 | 1123116 | 2587686 |
| 6 | P207 | ಎಂ.ಇ.ಐ. (ಸಂಜೆ)ಪಾಲಿಟೆಕ್ನಿಕ್ ಬೆಂಗಳೂರು | 6 | 280064 | 29772 | 250292 |
| 7 | P208 | ಜೆಎಸ್‌ಎಸ್ ಅಂಗವಿಕಲರ ಪಾಲಿಟೆಕ್ನಿಕ್, ಮೈಸೂರು | 58 | 2157362 | 453492 | 1703870 |
| 8 | E202 | ಬಿವಿಬಿ ಇಂಜಿನಿಯರಿಂಗ್ ಕಾಲೇಜು, ಹುಬ್ಬಳ್ಳಿ | 122 | 6001089 | 1807593 | 4193496 |
| 9 | E203 | ಪಿಇಎಸ್ ಇಂಜಿನಿಯರಿಂಗ್ ಕಾಲೇಜು, ಮಂಡ್ಯ | 190 | 9050831 | 3237789 | 5813042 |
| 10 | E204 | ಮಲೆನಾಡು ಇಂಜಿನಿಯರಿಂಗ್ ಕಾಲೇಜು, ಹಾಸನ | 148 | 7252340 | 2546076 | 4706264 |
| 11 | E207 | ಡಾ: ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು | 267 | 12370163 | 11934601 | 435562 |

| | | | | | | |
|---|---|---|---|---|---|---|
| 12 | E208 | ಬಸವೇಶ್ವರ ಇಂಜಿನೀಯರಿಂಗ್ ಕಾಲೇಜ್, ಬಾಗಲ್‌ಕೋಟೆ | 161 | 7424489 | 2043496 | 5380993 |
| 13 | E209 | ಬಿಎಂಎಸ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು | 152 | 8533604 | 8281800 | 251804 |
| 14 | E 210 | ಬಿಎಂಎಸ್ (ಸಂಜೆ) ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು | 30 | 2082153 | 1989535 | 92618 |
| | | **ಒಟ್ಟು ಮೊತ್ತ ರೂ.** | | **73234060** | **36025809** | **37208251** |

**ಟಿಪ್ಪಣಿ: ಕಾಲಂ(5) ರಲ್ಲಿ ಕಾಣಿಸಿರುವ ಮೊತ್ತವು ಅನುದಾನಿತ ಇಂಜಿನೀಯರಿಂಗ್ ಕಾಲೇಜುಗಳಿಗೆ ಸಂಬಂಧಿಸಿದಂತೆ ಶೇ.85 ರಷ್ಟು ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಸಂಬಂಧಿಸಿದಂತೆ ಶೇ.100 ರಷ್ಟು ಮೊತ್ತವನ್ನು ಅನುದಾನ ಬಿಡುಗಡೆಗಾಗಿ ಪರಿಗಣಿಸಲಾಗಿದೆ.**

ಷರತ್ತು ಮತ್ತು ನಿಬಂಧನೆಗಳು:-

1)ಉಲ್ಲೇಖ(2)ರ ಸರ್ಕಾರದ ಆದೇಶದನ್ವಯ ಇಂಜಿನೀಯರಿಂಗ್ ಕಾಲೇಜುಗಳಿಗೆ ಸರ್ಕಾರದ ಪಾಲಿನ ಸಹಾಯಧನವನ್ನು ಬಿಡುಗಡೆ ಮಾಡಲು ಪ್ರಿನ್ಸಿಪಾಲರುಗಳು ಸಲ್ಲಿಸಿರುವ ಸಿಬ್ಬಂದಿಯ ವಾಸ್ತವಿಕ ವೇತನವನ್ನು ಪರಿಗಣಿಸಲಾಗಿದೆ. ಈ ಸಹಾಯಧನ ಬಿಡುಗಡೆಯು ಇಲಾಖೆಯ ಕೂಲಂಕಷ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.

2)ಯಾವೊಬ್ಬ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದು ಕಂಡು ಬಂದಲ್ಲಿ, ಅಂತಹ ನೌಕರನಿಂದ ನೀಡಲಾಗಿರುವ ಹೆಚ್ಚುವರಿ ಮೊತ್ತವನ್ನು ನೇರವಾಗಿ ವಸೂಲಿ ಮಾಡಲಾಗುವುದು.

3)2012-13 ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ 'ಬಳಕೆ ಪ್ರಮಾಣಪತ್ರ' ಹಾಗೂ 'ಸಿಎ' ದೃಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.

4)ಅನುದಾನಿತ ಪಾಲಿಟೆಕ್ನಿಕ್‌ಗೆ ಸಂಬಂಧಿಸಿದಂತೆ, 2012-13ನೇ ಸಾಲಿನಲ್ಲಿ ಸಂಗ್ರಹಿಸಲಾಗಿರುವ ಬೋಧನಾಶುಲ್ಕ ಹಾಗೂ ಅಭಿವೃದ್ಧಿಶುಲ್ಕದ ಶೇ.50 ರ ಮೊತ್ತವನ್ನು ಇದುವರೆವಿಗೂ ಪೂರ್ಣವಾಗಿ ಸರ್ಕಾರಕ್ಕೆ ಜಮೆ ಮಾಡದಿದ್ದಲ್ಲಿ, ಕೂಡಲೇ ಜಮೆ ಮಾಡಿ ಚಲನ್ ಪ್ರತಿಯನ್ನು ಸಿಟಿಎಸ್-8 ರ ಬಿಲ್ಲಿನ ಜೊತೆಯಲ್ಲಿ ಇಲಾಖೆಗೆ ಸಲ್ಲಿಸುವಂತೆ ತಿಳಿಸಲಾಗಿದೆ.

5)ಈ ವೆಚ್ಚವನ್ನು 2013-14 ನೇ ಸಾಲಿನ ಲೆಕ್ಕ ಶೀರ್ಷಿಕೆ 2203-ತಾಂತ್ರಿಕ ಶಿಕ್ಷಣ-00-104-ಸರ್ಕಾರೇತರ ತಾಂತ್ರಿಕ ಕಾಲೇಜುಗಳು, ಹಾಗೂ ಸಂಸ್ಥೆಗಳಿಗೆ ಸಹಾಯಾನುದಾನ-0-01-ಸರ್ಕಾರೇತರ ತಾಂತ್ರಿಕ ಶಾಲೆಗಳು-101-ಸಹಾಯಾನುದಾನ(ಯೋಜನೇತರ)(2203-00-104-0-01-101) ರಡಿ ಭರಿಸತಕ್ಕದ್ದು.

ನಿರ್ದೇಶಕರು.

ಇವರಿಗೆ: ಮೇಲ್ಕಂಡ ಸಂಬಂಧಿಸಿದ ಎಲ್ಲಾ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಸೂಕ್ತ ಕ್ರಮಕ್ಕಾಗಿ.ಇನ್ನು ಮುಂದೆ ಪ್ರತಿ ತಿಂಗಳು ಅನುದಾನದ ಬಿಲ್ಲುಗಳನ್ನು ಆಯ ತಿಂಗಳಿನ 25ನೇ ತಾರಿಖಿನೊಳಗೆ ಸಲ್ಲಿಸಲು ತಿಳಿಸಲಾಗಿದೆ ತಪ್ಪಿದಲ್ಲಿ ಅಂತಹ ಬಿಲ್ಲುಗಳನ್ನು ಮುಂದಿನ ತಿಂಗಳಿನ ಅನುದಾನದಲ್ಲಿ ಮಾತ್ರ ಪರಿಗಣಿಸಲಾಗುವುದು.

ಪ್ರತಿ:
1] ಮಹಾಲೇಖಪಾಲರು(ಎ&ಇ), ಕರ್ನಾಟಕ, ಬೆಂಗಳೂರು.
2] ಸ್ಪೆಷಲ್ ಸೆಲ್, ಮಹಾಲೇಖಪಾಲರವರ ಕಛೇರಿ, ಬೆಂಗಳೂರು.
3] ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4] ಲೆಕ್ಕಾಧಿಕಾರಿಗಳು [ಬಿಲ್ಸ್].
5] ನಿರ್ದೇಶನಾಲಯದ ಬಿಎಲ್‌ಎಸ್[3], ಐಎನ್‌ಎಸ್ (1), (2), (4) ಮತ್ತು ಆರ್‌ಇಸಿ(2) ಉಪಶಾಖೆಗಳಿಗೆ.
6] ನಗದು ಶಾಖೆಗೆ ಮುಂದಿನ ಕ್ರಮಕ್ಕಾಗಿ.